

ಸಾವು!

ಮನುಷ್ಯನ ಬದುಕಿನ ಎಲ್ಲ ಗಂಭೀರ ಪ್ರಶ್ನೆಗಳು ಹೋಗಿ ತಲುಪುವುದು ಅಲ್ಲಿಗೇ. ಈಗಲಂತೂ ಸಾವೆಂಬುದು ಕೊರೊನಾ ಎಂಬ ಅಸಂಖ್ಯ ಬಾಹುಗಳ ಬ್ರಹ್ಮರಾಕ್ಷಸನ ರೂಪದಲ್ಲಿ ನಮ್ಮ ಸುತ್ತಮುತ್ತಲೂ ಕುಣಿಕುಣಿದಾಡುತ್ತಿದೆ. ಹಾಗಾದರೆ ಮನುಷ್ಯನ ಬದುಕಿನ ಗುರಿಯೇನು? ಅವನ ಬದುಕಿನ ತುದಿಯಲ್ಲಿರುವ ಸಾವೇ ಅವನ ಬದುಕಿನ ಉದ್ದೇಶವೂ ಆಗಿರಬಹುದೇ? ಈ ಸಾವು ಎಂಬ ಪರಿಕಲ್ಪನೆಯನ್ನು ಜೀವಸಂಕುಲದ ಇತರ ಪ್ರಭೇದಗಳು ಹೇಗೆ ಎದುರಿಸಿವೆ. ಸಾವು ಎಲ್ಲ ಜೀವಿಗಳ ಪಾಲಿಗೂ ದುರಂತವೇ? ಅಥವಾ ಬದುಕಿನ ಸಾರ್ಥಕತೆಯೇ? ತತ್ವಶಾಸ್ತ್ರ, ಧರ್ಮಶಾಸ್ತ್ರಗಳಿಗೆ ಸಂಬಂಧಿಸಿದಂತೆ ತೋರುವ ಈ ಪ್ರಶ್ನೆಗಳನ್ನು ಒಬ್ಬ ಜೀವವಿಕಾಸದ ಕುರಿತು ಅಧ್ಯಯನ ಮಾಡುತ್ತಿರುವ ವಿಜ್ಞಾನಿಯೊಬ್ಬ ಕೇಳಿಕೊಂಡರೆ ಹೇಗಿರಬಹುದು? ಸಾವಿನ ಸಮ್ಮುಖದಲ್ಲಿ ಸದಾ ಚಿಗುರೊಡೆಯುತ್ತಲೇ ಇರುವ ಬದುಕಿನ ಸೆಳೆತವನ್ನು ಕುರಿತ ಜಿಜ್ಞಾಸೆ ಈ ವಾರದ ‘ಸುಧಾ’ ವಿಶೇಷ. ಇದು ನಮ್ಮ ಸದ್ಯದ ಸಂಕಷ್ಟದ ಪರಿಸ್ಥಿತಿಯಲ್ಲಿ ನಮ್ಮ ಸುತ್ತಲಿನ ಜಗತ್ತನ್ನು, ಬದುಕನ್ನು ಬೇರೆಯದೇ ಬೆಳಕಿನಲ್ಲಿ ಹೊಳೆಸುವ ಪ್ರಯತ್ನವೂ ಹೌದು.

■ **ಕೆ.ಎನ್. ಗಣೇಶಯ್ಯ**